# HAVYAKA SANDESHA

ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. XXIV No. 3 | June 2016 | Pages 16 | **Rs. 2/-**





<u>**Forthcoming Event**</u>

## Shri Karki Venkataramana Shastri Suri Award Function

On 26th June, 2016 at Havyakara Sabhagraha, Ghatkopar.


*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai** B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

*Hon. Editor* : Smt. Amita S. Bhagwat

*Editorial Committee* : R. M. Shastri, Smt. Shashikala Hegde, Smt. Tanuja Hegde, Smt. Uma Swamy

*Publisher* : Narayan Akadas R. Hon. Gen. Secretary

*Printed at* : M/s. Navin Printers Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :** Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2015-2016**

*President* : Shivkumar P. Bhagwat
*Vice - President* : Sanjay Bhat
*Hon. Gen. Secretary* : Narayan Akadas
*Hon. Jt. Secretary* : R. M. Shastri, Dombivli
*Hon. Treasurer* : A. G. Bhat

***Elected Members :***

Smt. Tanuja Hegde, Suresh Hegde, Smt. Shashikala Hegde, R. N. Kameshwar, Gautam Upadhya, Smt. Uma Swamy, Keshav Hegde, Chidanand Bhagwat, Umesh Hegde

**Co-opted Member :** Shri A. K. Bhat

***Editorial***

# *Let's not get addicted !*

A man is walking on the streets with his fingers moving on the mobile. His eyes are fixed on it. Somebody else is helping him to walk on the road. A hilarious joke on whatsapp is being circulated on whatsapp itself. Whether a roti gets burnt or the food is overcooked we feel whatsapp is the culprit. If children are silent at home we blame it on Facebook or Mobile. At times, don't we feel that Mobile is totally occupying our space?

Jan Koum along with Brian Action changed the face of Messaging with WhatsApp. Communication has become so cheap that one feels the world is at his door. Jan Koum and Brian Action have become multi-millionaires. At the same time have they not enriched our lives too?

Can we imagine the thrill the people felt when Telephone was invented? Soon it became a part of our life. We were fascinated by multiple channels in TV at one time, today we are bored. Mere fascination does not last long unless it has substance. These new messaging applications have revolutionized communication. You may send message when you are free. The other person can read it and can get back to you when free. Friends who had lost touch have come together with the applications like whatsapp and Facebook. Distant cousins whose whereabouts were not known are found again. The excitement of meeting childhood friends on social media brings a sense of rejuvenation. In elderly, it takes out the feeling of loneliness. Earlier it was described that the distance is reduced; now we wonder whether there is any distance at all.

Inspite of all the progress we have a problem. Actually, our problem, is not with the social media but it is due to our over indulgence. We have lost a sense of discipline in our life. Our Sanatana Dharma did not deny us pleasures of life but taught us to be in balance. Just because food was available, we never chewed it for the entire day. We had to take meals only after offering prayers to God. Code of conduct directed our day to day life. The focus of life was always to do right things.

At any point of time these messaging apparatus cannot replace human touch. It cannot give the comfort of a warm hug. It's so easy to become friends on Face book. Somebody sends a friend request and someone accepts. But real friendship develops by sharing and also caring which is missing there.

Modern ways of communication might have taken away the excitement of waiting for letters. But it has brought the thrill of being connected instantantly. Therefore we are running a risk of being addicted to it which we should avoid at any cost.

e-mail : amitabhagwat@gmail.com



*PAGE DONATED BY : **ADVOCATE M. S. PANDIT** PUNE*

# *From The President's Desk*

Dear Members,



As I am writing to you, most of us are back from our summer vacation. We always work very hard to make our living. Though we have to work, it is equally important that we are also at leisure from time to time. It helps us to rejuvenate our minds. Also, having good times and remembering and relishing them become important. A good vacation gives us sweet memories which we cherish all our life and that's why perhaps, our album consists of the places we have visited. Similarly we are also ready to take up the activities of the Trust with new zeal.

We are all looking forward for the "Shri Karki Venkataraman Shastri Suri" award function, which is scheduled on 26th June. Shri Karki Venkataraman Shastri Suri was a great pioneer who revolutionized Kannada literature in the 19th century. In his honour, our Trust gives an award to persons in the field of Art, Journalism and Social Service. This year, our Trust is happy in conferring the award to "Dr. VyasaraoNinjoor" who is a renowned Kannada Writer. I request all our members to attend the function.

While living in this City of Dreams with different cultures and languages, we still want to and should hold on to our roots. We all want to move towards progress but at the same time we should preserve our ethos. The object of forming the Havyaka Welfare Trust by our founder Members was to strive for the betterment of our community in Mumbai and also to serve the society better with unity. The Trust has concern and respect for each and every member and endeavors to promote Unity amongst the Members.Therefore we hope to work for the betterment of our Trust and Community with the help from all our members.

I wish everyone a Safe and Happy monsoon...!

With Regards

**S. P. BHAGWAT**


UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*


**26/6/2016 ರಂದು ನಡೆಯುವ ಶ್ರೀ ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜರಗಲಿರುವ ಕನ್ನಡ ಜಾನಪದ ಸಮೂಹ ಗಾನ ಸ್ಪರ್ಧೆಯ ನಿಯಮಾವಳಿಗಳು :**

1. ಈ ಸಮೂಹ ಗಾನ ಸ್ಪರ್ಧೆಯಲ್ಲಿ ಪ್ರತಿ ಗುಂಪಿನಲ್ಲಿ ಕನಿಷ್ಠ 3, ಗರಿಷ್ಠ 5 ಸ್ಪರ್ಧಾಳುಗಳನ್ನು ಹೊಂದಿರತಕ್ಕದ್ದು.
2. ಸಮಯದ ಅವಧಿ ಮೂರು ನಿಮಿಷ ಪ್ರತಿ ಗುಂಪಿಗೆ.
3. ಸ್ಪರ್ಧೆಯಲ್ಲಿ ತಾಳ, ಗೆಜ್ಜೆ ಮತ್ತು ತಮಟೆಗಳಿಗೆ ಮಾತ್ರ ಅವಕಾಶ. ಇವುಗಳನ್ನು ಸ್ಪರ್ಧಾಳುಗಳೇ ತಂದುಕೊಳ್ಳತಕ್ಕದ್ದು.
4. ನಿರ್ಣಾಯಕರದ್ದೇ ಅಂತಿಮ ತೀರ್ಮಾನ.
5. ಸ್ಪರ್ಧೆಯ ವೇಳೆ ಮಧ್ಯಾಹ್ನ 12.00ರಿಂದ 3.00. ಮಧ್ಯಂತರದಲ್ಲಿ ಅರ್ಧ ಗಂಟೆ ಊಟದ ವಿರಾಮ.
6. *ಬಹುಮಾನಗಳ ವಿವರ :* ಪ್ರಥಮ ವಿಜೇತರು-ರೂ. 3,000/- ದ್ವಿತೀಯ ವಿಜೇತರು-ರೂ. 2,000/-, ತೃತೀಯ ವಿಜೇತರು-ರೂ. 1,000/- ಮತ್ತು ಪಾರಿತೋಷಕ.
7. **ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 20/6/2016**
8. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
   **ಶ್ರೀ ಜಿ. ವಿ. ಹೆಗಡೆ – 022-2665259 / 091674 34626**
   **ಶ್ರೀಮತಿ ಜಯಾ ಭಟ್ಟ – 0251-2487291/09987977330**

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE***

# ಅಪೂರ್ವ ಸಾಧಕಿ ವರದಾ ಶ್ರೀನಿವಾಸ

✍ **ಎಚ್. ವಿ. ರಾಮಚಂದ್ರ ರಾವ್**



*(ಇತ್ತೀಚೆಗೆ ಸೃಜನಾ ಬಳಗದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅನುಭವವನ್ನು ಹಂಚಿಕೊಂಡ ವರದಾ ಶ್ರೀನಿವಾಸರವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಕನ್ನಡದ ಹಿರಿಯ ಸಾಹಿತಿ. ಅತ್ತಿಮಬ್ಬೆ ಪ್ರತಿಷ್ಠಾನದ 'ಮನುಶ್ರೀ' ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಸಂದರ್ಭದಲ್ಲಿ ಡಾ. ವರದಾ ಶ್ರೀನಿವಾಸ ಅವರನ್ನು ಕುರಿತ ಅಭಿನಂದನಾ ನುಡಿಯನ್ನು ಪ್ರಕಟಿಸಲಾಗಿದೆ)*

ವಸ್ತುನಿಷ್ಠ ಗ್ರಹಿಕೆ ವಾಸ್ತವದ ಬೆಳಕು
ರಚನೆಯೇ ಕೃಷಿ ಸಾಹಿತ್ಯದ ರಸಋಷಿ
ದಾರ್ಶನಿಕ ದೃಷ್ಟಿ ಧನಾತ್ಮಕ ಚಿಂತನೆ
ಮೇಳೈಸಿದಾ ಮೂರ್ತಿ.... **ವರದಾ ಶ್ರೀನಿವಾಸ**

ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದ ಕಾಸರಗೋಡಿನಲ್ಲಿ ಅರಳಿದ ಕಮನೀಯ ಪುಷ್ಪಗಳೆನಿತೋ! ಬೇರು ಅಲ್ಲಿ, ಬೆಳಕು ಇಲ್ಲಿ. ಆ ನೆಲದ ಮಣ್ಣಿನ ವಾಸನೆಯನ್ನು ಮೈಗೂಡಿಸಿಕೊಂಡು ಗಡಿ ನಮ್ಮದಲ್ಲದಿದ್ದರೂ ನುಡಿಯನ್ನು ತಮ್ಮದಾಗಿಸಿಕೊಂಡು ತೆಂಕಣ ಪಡುವಣ ಗಾಳಿ ಸೋಂಕಿ ಒಳ್ನುಡಿಗಳೇಳ್ದು ಮೂಡಲ ಪಾಳೆಯದಲ್ಲಿ ಛಾಪು ಮೂಡಿಸಿದ ಹಿರಿಯ ಲೇಖಕಿ ಡಾ. ವರದಾ ಶ್ರೀನಿವಾಸ ಅವರು.

ಡಾ. ವರದಾ ಶ್ರೀನಿವಾಸ ಕನ್ನಡ ಸಾರಸ್ವತ ಲೋಕದಲ್ಲಿ ಒಡಮೂಡಿರುವ ಹಿರಿಯ ಹೆಸರು. ಶ್ರೀಮಂತಿಕೆಯ ವಂಶದಲ್ಲಿ ಹುಟ್ಟಿದವರನ್ನು ಬಾಯಲ್ಲಿ ಬೆಳ್ಳಿ ಚಮಚದೊಂದಿಗೆ ಹುಟ್ಟಿ ಬಂದವರೆಂದು ಕರೆಯುವುದು ರೂಢಿ. ಸಂಸ್ಕಾರ, ಸಂಸ್ಕೃತಿ, ಸಾಹಿತ್ಯಗಳ ಸಮ್ಮೇಳನಗೊಂಡ ಸಂಗಾತಿಗಳಿಗೆ ಸರಸ್ವತಿಯನ್ನು ಹುಟ್ಟುವಾಗಲೇ ನಾಲಗೆಯಲ್ಲಿ ಪಡೆದ ಅಪೂರ್ವ ಅದೃಷ್ಟದ ಪ್ರತಿಭಾವಂತೆ ಡಾ. ವರದಾ ಶ್ರೀನಿವಾಸ.

ತಾಯಿ ಶ್ರೀಮತಿ ಪಿ. ಕೆ. ಸುಂದರಿ, ತಂದೆ ವಿದ್ವಾನ್ ಪಿ. ಕೆ. ನಾರಾಯಣ ಕವಿಯಾಗಿ, ನಾಟಕಕಾರರಾಗಿ, ಅನುವಾದಕರಾಗಿ, ಸಂಪಾದಕರಾಗಿ, ಪತ್ರಕರ್ತರಾಗಿ, ಗಾಂಧೀವಾದಿಯಾಗಿ, ಸಮಾಜ ಸೇವಕರಾಗಿ ತಮಗೆ ನಿರ್ವಹಿಸಿದ ಕೆಲಸವನ್ನು ಯಶಸ್ವಿಗೊಳಿಸಿದ ಧೀಮಂತ ಚೇತನ. ಡಾ. ಶಿವರಾಮ ಕಾರಂತರಿಂದ 'ಆತನ ಒಂದು ದೊಡ್ಡ ಗುಣ, ಯಾವ ಕೆಲಸವನ್ನು ವಹಿಸಿಕೊಂಡರೂ ಒಂದಿಷ್ಟು ಆಲಸ್ಯವಿಲ್ಲದೆ ದುಡಿಯತಕ್ಕ ಬುದ್ಧಿ. ಅದರಿಂದ ಆತನ ವಿದ್ವತ್ತು ಬೆಳೆದಿದೆ. ಪ್ರತಿಷ್ಠೆಯೂ ಹೆಚ್ಚಿದೆ. ಅದರೊಂದರಿಂದಲೂ ಅಹಂಕಾರ ಮಾತ್ರ ಹುಟ್ಟಲಿಲ್ಲ. ನಾನು ಆತನನ್ನು ಕಂಡಂದಿನಿಂದ ತನ್ನ ಕೊನೆಯ ಗಳಿಗೆಯವರೆಗೂ ವಿನಯ ಸಂಪನ್ನನಾಗಿ ಬಾಳಿದವ ಪಿ.ಕೆ. ನಾರಾಯಣ' ಎಂದು ಹೊಗಳಿಸಿಕೊಂಡವರು. ಇಂತಹ ಸಾಹಿತ್ಯ ಪರಿಸರದಲ್ಲಿ ತಂದೆಯವರ ಸ್ನೇಹಿತರಾದ ಕೈಯಾರ, ಇದಿನಬ್ಬ, ಬಾಳಿಗಾ, ಪಡುಕೋಣೆ, ಹೆಗಡೆ, ಕಾರಂತ, ಸೇಡಿಯಾಪು, ಕಡೆಂಗೋಡ್ಲು ಮುಂತಾದವರ ಪ್ರಭಾವದಿಂದಾಗಿ ಒಂದು ಚೇತನವರಳಲು ಭೂಮಿಕೆ ಸಿದ್ಧವಾಗಿತ್ತು.

ಬದುಕಿನ ಯಾನದಲ್ಲಿ ಮಂಗಳೂರಿಗೆ ಪಯಣ. ಎಂ. ಎ. ರಾಷ್ಟ್ರಭಾಷಾ ವಿಶಾರದ (ಹಿಂದಿ), ವಿಶಾರದ (ಸಂಸ್ಕೃತ) ವಿದ್ಯೆ ಮುಗಿಸಿದ ನಂತರ ತಂದೆ ಕರ್ತವ್ಯ ನಿರ್ವಹಿಸಿದ್ದ ಕಾಲೇಜಿನಲ್ಲಿಯೇ ಉಪನ್ಯಾಸಕ ವೃತ್ತಿ. ಮದುವೆಯ ನಂತರ ಬೆಂಗಳೂರಿಗೆ ಪಯಣ. ಭಾಷಾಂತರ ಇಲಾಖೆಯಲ್ಲಿ ಸರ್ಕಾರಿ ಸೇವೆ. ಸಾಹಿತ್ಯದ ಕರೆಗೆ ಓಗೊಟ್ಟು ಸ್ವಯಂ ನಿವೃತ್ತಿ. ಸತತ 40 ವರ್ಷಗಳಿಂದಲೂ 40 ಕ್ಕೂ ಕೃತಿಗಳಿಂದ ನಿರಂತರ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿರುವ ಸಾಹಿತ್ಯ ಋಷಿ ಡಾ. ವರದಾ ಶ್ರೀನಿವಾಸ.

ಡಾ. ಹಂಪನಾ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾ ಪ್ರಬಂಧ 'ಪಂಜೆ ಮಂಗೇಶರಾಯರ ಕೃತಿಗಳು ಒಂದು ಅಧ್ಯಯನ'. ಸಮೃದ್ಧ ಹಾಗೂ ಸಾರ್ಥಕ ಬದುಕು ಬರಹಗಳಿಂದ ದೊಡ್ಡ ಆದರ್ಶವನ್ನು ಬಿಟ್ಟು ಹೋದ ಪಂಜೆಯವರ ಸಿದ್ಧಿ ಸಾಧನೆಗಳನ್ನು ಅದರೆಲ್ಲ ಸಮಗ್ರತೆಯಲ್ಲಿ, ಸಂಕೀರ್ಣತೆಯಲ್ಲಿ ಶೋಧಿಸಿ ನೋಡುವ ಪ್ರಯತ್ನದ ಫಲವಾಗಿದೆ.

ಮುಂದಿನದು ಇತಿಹಾಸ. ವಿಮರ್ಶಾ ಕೃತಿಗಳಾಗಿ ಸಮ್ಮೇಲನ, ಮಹಿಳೆ, ವೈಚಾರಿಕತೆ ಮತ್ತು ವಿಮರ್ಶೆ. ಮಕ್ಕಳ ಸಾಹಿತ್ಯಕ್ಕೆ ಡಾ. ಶಿವರಾಮ ಕಾರಂತರ ಕೊಡುಗೆ ಹಾಗೂ ಅರ್ಥೈಸಿದ ರೀತಿ,ಸಂಶೋಧನೆಯಲ್ಲಿ ಪಂಜೆ ಮಂಗೇಶರಾಯರ ಕೃತಿಗಳು- ಒಂದು ಅಧ್ಯಯನ, ಪ್ರೊ. ವಿ. ಕೃಷ್ಣ ಶೆಟ್ಟಿ- ಒಂದು ಅಧ್ಯಯನ, ಅವತಾರ ಶೃಂಗ- ಒಂದು ಅಧ್ಯಯನ,ಸಂಪಾದನೆಯಲ್ಲಿ ಸ್ಫಟಿಕ ಮಂಜೂಷ, ರಜತ ಸಿರಿ, ಸಾತತ್ಯ, ಶ್ರೀ ನುಡಿ ತತ್ವ ಚಿಂತನ, ಕಹಳೆ ಮತ್ತು ಹನ್ನೆರಡು ಕಥಾ ರತ್ನಗಳು. ಮಕ್ಕಳ ಸಾಹಿತ್ಯದಲ್ಲಿ ಪುಟ್ಟನ ಗಾಳಿಪಟ, ಪುಷ್ಪಕ ವಿಮಾನ, ಶೋಧ, ಪೌರಾಣಿಕ ಪಾತ್ರಗಳು, ಸಾಮಾಜಿಕ ಚಿತ್ರಗಳು, ಯಾರು ಶ್ರೇಷ್ಠರು, ಸ್ಮರಣೆ ಸೊಗಸು ಲಲಿತ ಪ್ರಬಂಧಗಳು, ಮುಂಜಾವದ ಕನಸುಗಳು, ಸೂರ್ಯೋದಯ ಕವನ ಸಂಕಲನಗಳು.

'ಸೂರ್ಯೋದಯ' ಮಕ್ಕಳ ಕವನ ಸಂಕಲನ, ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ನಡೆಯುವ ಮಕ್ಕಳ ಚಟುವಟಿಕೆಗಳು.

'ಇರುಳು ಕಳೆಯಲು ರವಿಯು ಮೂಡಿದ
ಬಣ್ಣ ಚೆಲ್ಲಿತು ಗಗನದಿ
ಹಸಿರು ಚಿಗುರಲಿ ಇರುಳ ಹನಿಗಳು
ಬುವಿಯು ನೆನೆಯಿತು ಚಂದದಿ'

ಮುತ್ತಿನ ಮಾಲೆಗಳಂತೆ ಸರಳ ಭಾಷೆಯಲ್ಲಿ ಕಿರಿದರೊಳು ಪಿರಿದರ್ಥಮಂ ನೀಡುವ ಕವನಗಳಾಗಿವೆ. ಅರ್ಥೈಸಿದ ರೀತಿಯ ಲೇಖನಗಳಲ್ಲಿ ವಿಶ್ಲೇಷಣೆ, ಸಂಶೋಧನೆ,ಸೀಳು ನೋಟ, ಪರಾಮರ್ಶೆಯ ಜೊತೆಯಲ್ಲಿ ವಿವೇಚನೆ, ಸಮರ್ಥನೆಯ ಜೊತೆಯಲ್ಲಿ ನಿರ್ಣಯ, ಔಚಿತ್ಯಪೂರ್ಣವಾದ ವಿವರಗಳನ್ನು ಗಮನಿಸಬಹುದಾಗಿದೆ.

ಸರ್ಕಾರಿ ಸೇವೆ, ಅನೇಕ ಸಂಘ-ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಣೆ, ನೂರಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಮಂಡಿಸಿದ ಪ್ರಬಂಧಗಳು -ಹೀಗೆ ಇವರ ಬಹುಮುಖ ಪ್ರತಿಭೆ ಅನಾವರಣಗೊಂಡಿದೆ. ಸರಳ ಸೌಜನ್ಯತೆಯ ಪ್ರತೀಕವಾದ ಇವರನ್ನು ಅರಸಿ ಬಂದ ಪ್ರಶಸ್ತಿ ಪುರಸ್ಕಾರ ಗಳೆಷ್ಟೋ, ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನೀಡಲಾದ ಕೆಂಪೇಗೌಡ ಪ್ರಶಸ್ತಿ, ಮಲ್ಲಿಕಾ ಪ್ರಶಸ್ತಿ, ಜಿ. ಪಿ. ರಾಜರತ್ನಂ ಪ್ರಶಸ್ತಿ, ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಶಸ್ತಿ, 1992 ರ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಧಾರವಾಡ ವಿದ್ಯಾವರ್ಧಕ ಸಂಘ, ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ, ಸಮಗ್ರ ಸಾಹಿತ್ಯಕ್ಕೆ ಸುಭದ್ರಾ ಕುಮಾರಿ ಚೌಹಾಣ್ ಜನ್ಮ ಶತಾಬ್ದಿ ಪ್ರಶಸ್ತಿ (ಪಾಣಿಪತ್), ಅಮೇರಿಕಾದ 'ಅಮೇರಿಕನ್ ಬಯೋಗ್ರಾಫಿಕಲ್ ಇನ್ಸ್‌ಟಿಟ್ಯೂಟ್'ನ 'ಪ್ರೊಫೆಶನಲ್ ವಿಮೆನ್ಸ್ ಅಡ್ವೈಸರಿ' ಬೋರ್ಡಿನ ಗೌರವ ಸದಸ್ಯತ್ವ'.

'ಡಾ. ಕೆ. ಆರ್. ನಾರಾಯಣನ್ ಫೌಂಡೇಶನ್ ಟ್ರಸ್ಟ್' ನ ವತಿಯಿಂದ 'ಸುವರ್ಣ ಶ್ರೀ' ಪ್ರಶಸ್ತಿ, ಸುವರ್ಣ ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿಯ ವತಿಯಿಂದ ವರ್ಷದ ವೀರ ಮಹಿಳೆ ಪ್ರಶಸ್ತಿ, ಪ್ರತಿಭಾವರ್ಧಕ ಅಕಾಡೆಮಿಯಿಂದ ಕರ್ನಾಟಕ ಭೂಷಣ ಪ್ರಶಸ್ತಿ, ವಿಶ್ವ ಕನ್ನಡ ಸಂಸ್ಥೆಯಿಂದ 'ವಿಶ್ವ ಕನ್ನಡ ಕಣ್ಮಣಿ' ಪ್ರಶಸ್ತಿ, '2010 ರ ಡಾ. ಅನುಪಮಾ ನಿರಂಜನ ಪ್ರಶಸ್ತಿ' ಹಾಗೂ ಬೆಂಗಳೂರಿನಲ್ಲಿ ನಡೆದ 77 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿತರು.

*PAGE DONATED BY : **SHRI N. R. HEGDE,** DOMBIVLI*

# ಸಂಸ್ಕೃತ ಸಾಹಿತ್ಯದ ಹಿರಿಮೆ

✍ ಶೈಲಜಾ ಹೆಗಡೆ, ಮುಂಬಯಿ

**ಅಂತ್ಯಾಕ್ಷರೀ, ಸಂಖ್ಯಾ ಪರಿಚಯ, ಲೋಕೋಕ್ತಿ, ಅಮರಸಾರ**

**ಅಂತ್ಯಾಕ್ಷರೀ** : ಪದ್ಯದ ಅಥವಾ ಶ್ಲೋಕದ ಕೊನೆಯ ಅಕ್ಷರದಿಂದ ಪ್ರಾರಂಭಿಸಿ. ಮತ್ತೊಂದು ಪದ್ಯವನ್ನೋ, ಶ್ಲೋಕವನ್ನೋ ಉಚ್ಚರಿಸುವ 'ಅಂತ್ಯಾಕ್ಷರೀ' ಎಂಬ ಮನೋರಂಜನೆಯ ಪ್ರಕಾರ ಇಂದಿನ ಜನಪ್ರಿಯ ಆಟಗಳಲ್ಲಿ ಒಂದು. ಸ್ನೇಹಕೂಟ, ಹುಟ್ಟುಹಬ್ಬ, ವನಭೋಜನ ಮುಂತಾದ ವಿಶೇಷ ಸಮಾರಂಭಗಳಲ್ಲಿ ಸರ್ವೇಸಾಮಾನ್ಯವಾಗಿ ಈ ಅಂತ್ಯಾಕ್ಷರೀ ಆಟವನ್ನು ಆಡುತ್ತಾರೆ. ಆಬಾಲವೃದ್ಧರೂ ಆಡಬಹುದಾದ ಏಕಮೇವ ಕ್ರೀಡಾ ಪ್ರಕಾರ 'ಅಂತ್ಯಾಕ್ಷರೀ' ಎಂದರೆ ಅತಿಶಯೋಕ್ತಿಯೆನಿಸದು. ಬಸ್ಸಿನಲ್ಲೋ, ರೈಲಿನಲ್ಲೋ ಪ್ರಯಾಣಿಸುವಾಗ, ಶಾಲಾ ಕಾಲೇಜು ವಿದ್ಯಾರ್ಥಿಗಳು ಅಂತ್ಯಾಕ್ಷರಿಯನ್ನು ಉಚ್ಚರಿಸುತ್ತ ಆನಂದಿಸುವುದನ್ನು ಕಾಣಬಹುದು. ಆದರೆ ಆನಂದೋತ್ಸಾಹದ ಪರಮ ಸಾಧನವಾದ ಅಂತ್ಯಾಕ್ಷರೀ ಎಂಬ ಪ್ರಕಾರ ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿ ಲಭ್ಯವಿದ್ದು, ಪೂರ್ವಜರು ಇದಕ್ಕೆ ವಿಶೇಷ ಮಹತ್ವವನ್ನು ನೀಡಿದ್ದರು. ಇದು ಕೇವಲ ಮನೋರಂಜನೆಯನ್ನು ನೀಡುವ ಕ್ರೀಡಾ ಪ್ರಕಾರವಾಗಿರದೆ, ಜ್ಞಾನೋಪದೇಶದ ವಿಧಾನಗಳಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿತ್ತು. ನೆನಪಿನ ಶಕ್ತಿಯನ್ನು, ಮೇಧಾ ಶಕ್ತಿಯನ್ನೂ ಹೆಚ್ಚಿಸುವ ಅಂತ್ಯಾಕ್ಷರೀ ಶ್ಲೋಕಗಳು ಅಧ್ಯಯನಶೀಲರ ಸೃಜನಶಕ್ತಿಯನ್ನೂ ವರ್ಧಿಸುತ್ತವೆ. ಹಲವು ಸುಭಾಷಿತಗಳೂ, ಮಹಾಭಾರತದ ಶ್ಲೋಕಗಳೂ ಅಂತ್ಯಾಕ್ಷರಿಯಲ್ಲಿ ಕಂಡು ಬರುತ್ತವೆ. ದೃಷ್ಟಾಂತವಾಗಿ ಕೆಲವು ಶ್ಲೋಕಗಳನ್ನು ಗಮನಿಸಬಹುದು.

'ಅಣುಪೂರ್ವಂ ಬೃಹತ್ಪಶ್ಚಾತ್  
ಭವತ್ಯಾರ್ಯೇಷು ಸಂಗತಮ್।  
ವಿಪರೀತ ಮನಾರ್ಯೇಷು  
ಯಥೇಚ್ಛಸಿ ತಥಾ ಕುರು॥'

(ಸಜ್ಜನರ ಜೊತೆಗಿನ ಪ್ರಾರಂಭದ ಚಿಕ್ಕ ಸ್ನೇಹವೂ ಕಾಲಾಂತರದಲ್ಲಿ ವ್ಯಾಪಕವಾಗಿ ಬೆಳೆದು, ಅದು ಶಾಶ್ವತ ಸ್ನೇಹವಾಗಿ ಪರಿಣಮಿಸುತ್ತದೆ. ಆದರೆ ದುರ್ಜನರೊಂದಿಗಿನ ಸ್ನೇಹವು ಇದಕ್ಕೆ ವಿರುದ್ಧವಾಗಿ ಪರಿಣಾಮವನ್ನು ಉಂಟು ಮಾಡುತ್ತದೆ. (ಇವುಗಳಲ್ಲಿ) ಯಾವುದು ನಿನ್ನ ಇಚ್ಛಿತವೋ ಹಾಗೆ ಮಾಡು)

ಪ್ರಸ್ತುತ ಶ್ಲೋಕದ ಕೊನೆಯ ಅಕ್ಷರ 'ರ' ಇರುವುದರಿಂದ ಅಂತ್ಯಾಕ್ಷರಿಯ ನಿಯಮಾನುಸಾರ ಮತ್ತೊಂದು ಶ್ಲೋಕವು 'ರ'ಕಾರದಿಂದಲೇ ಪ್ರಾರಂಭ ವಾಗುತ್ತದೆ.

'ರಾಗೇ ದ್ವೇಷೇ ಚ ಮಾನೇ ಚ  
ದ್ರೋಹೇ ಪಾಪೇ ಚ ಕರ್ಮಣಿ।  
ಅಪ್ರಿಯೇ ಚೈವ ಕರ್ತವ್ಯೇ  
ಚಿರಕಾರಿ ಪ್ರಶಸ್ಯತೇ॥'

(ಯಾರು ಅಪ್ರಿಯವಾದ ಕಾರ್ಯಗಳನ್ನು ಮಾಡುವಾಗ ಅಂದರೆ, ಸಿಟ್ಟು, ವೈರ, ಅಹಂಕಾರ, ಪಾಪಕರ್ಮ ಮುಂತಾದವುಗಳನ್ನು ಆಚರಿಸುವಾಗ ವಿಳಂಬದಿಂದ ನಡೆದುಕೊಳ್ಳುವರೋ ಅವರು ಪ್ರಶಂಸೆಗೆ ಪಾತ್ರರಾಗುತ್ತಾರೆ)

ಈ ಶ್ಲೋಕದ ಕೊನೆಯ ಅಕ್ಷರ 'ತ' ಇರುವುದರಿಂದ ಮುಂದಿನ ಶ್ಲೋಕವು 'ತನ್ಮೂಲಂ ಗುರುತಾಯಾ....' ಎಂದು ಮುಂತಾಗಿ ಮುಂದುವರಿಯುತ್ತದೆ. ಹೀಗೆ ಮುಕ್ತಾಯವಿಲ್ಲದ ಅಂತ್ಯಾಕ್ಷರೀ ಮಾಲೆಯನ್ನು ಹೆಣೆಯುತ್ತ ಸಾಗಬಹುದು. ಅಂತ್ಯಾಕ್ಷರೀ ಶ್ಲೋಕಗಳು ಅತ್ಯಂತ ಅರ್ಥಪೂರ್ಣವಾಗಿದ್ದು ಬದುಕಿನ ಆದರ್ಶವನ್ನು ಬಿಂಬಿಸುತ್ತವೆ. ಜ್ಞಾನಮಾರ್ಗದ ಮಜಲುಗಳಲ್ಲಿ ಸಂಗ್ರಹಿಸಬಹುದಾದ ಸತ್ವಪೂರ್ಣ ಬುತ್ತಿಯಾಗಿ ನಿಲ್ಲುತ್ತವೆ. ಅಂತ್ಯಾಕ್ಷರಿಯ ಶ್ಲೋಕಗಳು ಹಲಂತವಾಗಿದ್ದರೆ (ವ್ಯಂಜನಾಂತ) ಆ ಸಂದರ್ಭದಲ್ಲಿ ವ್ಯಂಜನಾಂತದ ಹಿಂದಿನ ಅಕ್ಷರವನ್ನು ಬಳಸಬೇಕೆಂಬ ನಿಯಮವನ್ನು ಸೂಚಿಸಲಾಗಿದೆ. ಉದಾಹರಣೆಗಾಗಿ.

"ಪರೋಪಿ ಹಿತವಾನ್ಬಂಧುಃ... ಔಷಧಮ್"

ಮೇಲಿನ ಶ್ಲೋಕದಲ್ಲಿ ಕೊನೆಯ ಅಕ್ಷರ 'ಮ್' ವ್ಯಂಜನ (ಹಲಂತ, ಅರ್ಧಾಕ್ಷರ) ವಾಗಿರುವುದರಿಂದ ಮುಂದಿನ ಅಂತ್ಯಾಕ್ಷರೀ ಶ್ಲೋಕವು ಹಿಂದಿನ ಅಕ್ಷರ 'ಧ' ದಿಂದ ಪ್ರಾರಂಭವಾಗುತ್ತದೆ. (ಧೃತಿಃ ಕ್ಷಮಾ ದಯಾ.... ಶ್ರಿಯಃ॥)

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ 'ಅಂತ್ಯಾಕ್ಷರೀ' ಎಂಬ ವಿಶಿಷ್ಟ ಪ್ರಕಾರವಿದ್ದು, ಅದು ಅತ್ಯಂತ ರೋಚಕವಾಗಿ ಮುಂದುವರಿಯುತ್ತದೆ. ಅಂತ್ಯಾಕ್ಷರಿಯಂತೆಯೇ ಸಂಖ್ಯಾ ಪರಿಚಯವೂ ಸಾಹಿತ್ಯದ ಪ್ರಕಾರವಾಗಿ ಮೂಡಿಬಂದಿರುವುದನ್ನು ಕಾಣಬಹುದು.

**ಸಂಖ್ಯಾ ಪರಿಚಯ** : ಹೆಸರೇ ಸೂಚಿಸುವಂತೆ 'ಸಂಖ್ಯಾ ಪರಿಚಯ' ಶ್ಲೋಕಗಳು ಸಂಖ್ಯೆಯನ್ನು ಪರಿಚಯಿಸುತ್ತವೆ. ಜೊತೆ ಜೊತೆಯಲ್ಲಿಯೇ ವಿಶಿಷ್ಟ ಜ್ಞಾನವನ್ನು ನೀಡುತ್ತವೆ. ಕನ್ನಡ, ಹಿಂದಿ, ಇಂಗ್ಲಿಷ್ ಮೊದಲಾದ ಭಾಷೆಗಳಲ್ಲಿ ಸಂಖ್ಯೆಯನ್ನು ಸೂಚಿಸುವ ಶಿಶುಗೀತೆಗಳಿರುವಂತೆ (ಒಂದು ಎರಡು ಬಾಳೆಲೆ ಹರಡು) ಸಂಸ್ಕೃತ ಭಾಷೆಯಲ್ಲಿ ಸಂಖ್ಯೆಯನ್ನು ಸೂಚಿಸುವ ಪ್ರೌಢ ಶ್ಲೋಕಗಳು ದೊರೆಯುತ್ತವೆ. ಇಲ್ಲಿ ಸಂಖ್ಯೆಯ ಜೊತೆಗೆ ಜ್ಞಾನವನ್ನು ನೀಡುವ ವಿಧಾನ ಗಮನಾರ್ಹವಾದುದು. ಈ ಪ್ರಕಾರದ ಶ್ಲೋಕಗಳಲ್ಲಿ ಸುಭಾಷಿತಗಳೂ ಸೇರಿಕೊಂಡಿವೆ. ಉದಾಹರಣೆಗಾಗಿ:

"ಏಕೋ ಹಿ ಗುಣವಾನ್ ಪುತ್ರೋ  
ನಿರ್ಗುಣೈಃ ಕಿಂ ಶತೈರಪಿ  
ಏಕಶ್ಚಂದ್ರೋ ಜಗಚ್ಚಕ್ಷುಃ  
ನಕ್ಷತ್ರೈಃ ಕಿಂ ಪ್ರಯೋಜನಮ್।"

(ಗುಣವಂತನಾದ ಒಬ್ಬ ಪುತ್ರನಿದ್ದರೆ ಸಾಕು. ಗುಣವಿಲ್ಲದ ನೂರು ಮಕ್ಕಳಿಂದ ಏನು ಪ್ರಯೋಜನ? ಹಾಗೆಯೇ ಜಗತ್ತಿಗೆ ಬೆಳಕನ್ನು ನೀಡುವ ಒಬ್ಬ ಚಂದ್ರಮನಿರುವಾಗ ನಕ್ಷತ್ರಗಳಿಂದೇನು ಪ್ರಯೋಜನ?)

ಇದೇ ರೀತಿ 'ದ್ವಾ ವಿಮ್ ಪುರುಷೌ ಲೋಕೇ...' ಎಂಬ ಶ್ಲೋಕವು ಸಂಖ್ಯೆ ಎರಡನ್ನು ಪ್ರತಿನಿಧಿಸುತ್ತದೆ. ಸಾಹಿತ್ಯದಲ್ಲಿ ಸಂಖ್ಯೆಯನ್ನು ಸೂಚಿಸುವ ಅನೇಕ ಶ್ಲೋಕಗಳು ಉಪಲಬ್ದವಿದ್ದು, ಸಂಸ್ಕೃತ ಸಾಹಿತ್ಯ ಕ್ಷೇತ್ರವನ್ನು ವಿಸ್ತಾರಗೊಳಿಸಿವೆ. 'ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ' ಎಂಬ ಉಪನಿಷತ್ ವಾಕ್ಯದಂತೆ, ಗಳಿಸಿದ ಜ್ಞಾನವನ್ನು ಮನನ ಮಾಡಿಕೊಳ್ಳಲು ಬೇಕಾದ ಎಲ್ಲ ಉಪಾಯಗಳೂ ಸಂಸ್ಕೃತ ಸಾಹಿತ್ಯದಲ್ಲಿ ಅಗಣಿತವಾಗಿ ಹುದುಗಿಕೊಂಡಿವೆ. ಆಳವಾದ ಅಧ್ಯಯನದಿಂದ ಅವು ಗೋಚರಿಸುತ್ತವೆ. ಹಿಂದಿನ ಕಾಲದ ಮೌಖಿಕ ಪಾಠಕ್ರಮದಲ್ಲಿ ಈ ಎಲ್ಲ ಪ್ರಕಾರದ ಶ್ಲೋಕಗಳನ್ನೂ ಕಂಠಪಾಠ ಮಾಡುವ ಕ್ರಮವಿತ್ತು. ಲೋಕೋಕ್ತಿ ಮತ್ತು ಅಮರಸಾರವನ್ನೂ ಇವುಗಳ ಸಾಲಿನಲ್ಲಿ ಸೇರಿಸಬಹುದು.

*PAGE DONATED BY : **SHRI S. M. HEGDE,** SANTACRUZ*

**ಲೋಕೋಕ್ತಿ :** ಪ್ರತಿಯೊಂದು ಭಾಷೆಯಲ್ಲಿಯೂ ಲೋಕೋಕ್ತಿಗೆ ವಿಶಿಷ್ಟ ಸ್ಥಾನವಿದೆ. ಇವು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಕಿರಿದರೊಳು ಪಿರಿದರ್ಥವನ್ನು ಹೊಂದಿರುವ ಶಿಷ್ಟದ ಅನುಭವದ ನುಡಿಗಳಾಗಿವೆ. ಬದುಕಿನ ಹಲವು ಕಠಿಣ ಸಂದರ್ಭಗಳಲ್ಲಿ ಲೋಕೋಕ್ತಿಗಳು ಉತ್ತಮ ಮಾರ್ಗದರ್ಶಿಯಾಗಿ ನಿಲ್ಲಬಲ್ಲವು. ಸುಭಾಷಿತಗಳಿಂದಲೂ, ಮಹಾಕವಿಗಳ ಮಹಾಕಾವ್ಯಗಳಿಂದಲೂ ಈ ಸದುಕ್ತಿಗಳನ್ನು ಪಡೆಯಬಹುದು. ಸಂಸ್ಕೃತ ಸಾಹಿತ್ಯದ ಇಂತಹ ಮಹತ್ವದ ಉಕ್ತಿಗಳನ್ನು ಉಳಿದ ಭಾಷೆಗಳೂ ಎರವಲಾಗಿ ಪಡೆದುಕೊಂಡಿರುವುದನ್ನು ಕಾಣಬಹುದು. ಸಂಸ್ಕೃತ ಲೋಕೋಕ್ತಿಗಳನ್ನು ಹೋಲುವ ಕೆಲವು ಕನ್ನಡ ಉಕ್ತಿಗಳನ್ನೂ ಉದಾಹರಿಸಲಾಗಿದೆ.

1. 'ಮೌನಂ ಸರ್ವಾರ್ಥ ಸಾಧಕಮ್' (ಸಂಸ್ಕೃತ)
   'ಮಾತು ಬೆಳ್ಳಿ ಮೌನ ಬಂಗಾರ' (ಕನ್ನಡ)
2. 'ಸಂಪೂರ್ಣಂ ಕುಂಭೋ ನ ಕರೋತಿ ಶಬ್ದಂ'
   'ತುಂಬಿದ ಕೊಡ ತುಳುಕುವುದಿಲ್ಲ'
3. 'ನ ಕೂಪಖನನಂ ಯುಕ್ತಂ ಪ್ರದೀಪೇ ವಹ್ನಿನಾಗೃಹೇ'
   ಮನೆಗೆ ಬೆಂಕಿ ಬಿದ್ದಾಗ ಬಾವಿ ತೋಡುವುದು ತರವಲ್ಲ
4. 'ನ ಚ ವ್ಯಾಧಿಸಮೋ ರಿಪುಃ'
   'ಅನಾರೋಗ್ಯಕ್ಕೆ ಸಮನಾದ ವೈರಿಯಿಲ್ಲ'
5. 'ಜಲೇ ಗತೇ ಕಿಂ ಖಲು ಸೇತುಬಂಧಃ'
   'ನೀರು ಹರಿದು ಹೋದ ಮೇಲೆ ಅಣೆಕಟ್ಟಿನ ಪ್ರಯೋಜನವೇನು?'
6. 'ಅತಿ ಸರ್ವತ್ರ ವರ್ಜಯೇತ್'
   'ಅತಿವರ್ಜ್ಯ'
7. 'ದೃಷ್ಟಿಪೂತಂ ನ್ಯಸೇತ್ಪಾದಮ್'
   'ನೋಡಿ ಅಡಿಯಿಡಬೇಕು'
8. 'ಜಾತಸ್ಯ ಹಿ ಧ್ರುವೋ ಮೃತ್ಯುಃ'
   'ಹುಟ್ಟಿದವನಿಗೆ ಸಾವು ನಿಶ್ಚಿತ'

ಇದೇ ರೀತಿ ಎಲ್ಲ ಭಾರತೀಯ ಭಾಷೆಗಳಲ್ಲೂ ಲೋಕೋಕ್ತಿಗಳು ಮನೆ ಮಾಡಿಕೊಂಡಿವೆ. ಜನನಾಡಿಯಾಗಿ ಅವು ಹರಿದುಬಂದಿದೆ.

**ಅಮರಸಾರ :** ಸಮಾನಾರ್ಥಗಳ ಸಮೂಹವೇ ಅಮರಸಾರವಾಗಿದೆ. ಇದನ್ನು ಅಮರಕೋಶವೆಂತಲೂ ಕರೆಯುತ್ತಾರೆ. ಅಮರಗಳು ಕೇವಲ ಸಮಾನಾರ್ಥಕ ಪದಗಳ ಸಮೂಹವಾಗಿರದೆ, ಸುವ್ಯವಸ್ಥಿತವಾಗಿ ಹೆಣೆಯಲ್ಪಟ್ಟ ಶ್ಲೋಕರೂಪಗಳು. ಹಿಂದೆ ಎಳವೆಯಲ್ಲಿಯೇ ಇವನ್ನು ಕಂಠಪಾಠ ಮಾಡಿಸುವ ಪರಿಪಾಠವಿತ್ತು. ಮಸ್ತಿಷ್ಕವೇ ಒಂದು ಕೋಶವಾಗಿ ಬಿಡುತ್ತಿತ್ತು. ಸುಲಭವಾಗಿ ಕಂಠಸ್ಥವಾಗಬಲ್ಲ ಇವುಗಳನ್ನು ಅಮರಗಳೆಂದು ಕರೆದರು. ಬರವಣಿಗೆಯೇ ಪ್ರಧಾನವಾದ ಇಂದಿನ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಇವು ಕೇವಲ ಪುಸ್ತಕದ ವಿದ್ಯೆಯಾಗಿ ಉಳಿದಿವೆ. ಉದಾಹರಣೆಯಾಗಿ ಕೆಲವು ಅಮರಗಳನ್ನು ಉಲ್ಲೇಖಿಸಲಾಗಿದೆ.

ಸೂರ್ಯ : ಭಾಸ್ಕರಶ್ಚ ರವಿರ್ಭಾನುಃ ಸೂರ್ಯಾದಿತ್ಯ ದಿವಾಕರಃ।

ಸಾಗರ : ಉದನ್ವಾನುದಧಿಃ ಸಿಂಧುಃ ಸರಸ್ವಾನ್ ಸಾಗರೋರ್ಣವಃ।

ಚತುರ : ಚತುರಃ ಕುಶಲೋದಕ್ಷಃ ಪ್ರವೀಣೋ ನಿಪುಣಸ್ತಥಾ।

ಪಿತಾ : ತಾತಸ್ತು ಜನಕಃ ಪಿತಾ।

ಮಾತಾ : ಜನಯಿತ್ರೀ ಪ್ರಸೂರ್ಮಾತಾ ಜನನೀ।

ರಾಜಾ : ರಾಜಾ ರಾಟ್ ಪಾರ್ಥಿವಕ್ಷ್ಮಾಭೃನ್ನೃಪಭೂಪ ಮಹೀಕ್ಷಿತಃ।

ಮರುತ್ : ಸಮೀರಮಾರುತಮರುತ್ ಜಗತ್ಪ್ರಾಣ ಸಮೀರಣಃ।

ಮಿತ್ರ : ಸ್ನಿಗ್ಧಃ ಸುಹೃತ್ ವಯಸ್ಯಶ್ಚ ಮಿತ್ರಂ ಸಹೃದಯಃ ಸಖಾ।

*(ಮುಂದುವರಿಯುವುದು)*

---

# ಎಂಥ ಮೂರ್ತಿ?

**- ವಿ. ಜಿ. ಭಟ್ಟ**

ಈ ಗಾಳಿಯ ಬೆನ್ನ ಮೇಲೆ
ಮೂರ್ತಿಯೊಂದ ಕೆತ್ತಬೇಕು

ಯಾವ ನಿಲುವು? ಎಂಥ ರೂಪ?
ಅದ ತಿಳಿಯಲು ಬಾಳದ್ವೀಪ
ಮತ್ತೇ ಮತ್ತೇ ಸುತ್ತಬೇಕು
ಮೂರ್ತಿಯೊಂದ ಕೆತ್ತಬೇಕು

ಎಳೆದ ಗೆರೆಗಳೋ ಬಾಲ, ಕೋಡು
ಕಾಲ್ಗಳು ಒಂದೋ ಎರಡೋ ಜೋಡು
ಅದನೇ ಅದನೇ ಕೆತ್ತುವದೇ?

ಪುರಾಣ ಪುರುಷರ ಮುಖಬಿಂಬಗಳು
ಇತಿಹಾಸವನೇ ನಿರ್ಮಿಸಿ ಒರಗಿದ
ವೀರರ ಕಂಬಗಳು

ಎಲ್ಲಾ ಎಲ್ಲಾ ನೆನೆ ನೆನೆ ಮರೆಯದಿರು
ಎಲ್ಲಾ ತಿಳಿದೂ ಜಪಿಸಿಯು ಕೂಡಾ
ಅವುಗಳ ನೆಳಲನೆ ಬರೆಯದಿರು

ಅನುಭವಗಳ ಬೆಳಕೊಂದೇ
ಕಡೆ ತನಕವು ಸಾಲದಯ್ಯ
ಕನಸಿನ ಆ ಮಂಜಿನಲ್ಲಿ

ಮೂಡಿ ಮೂಡಿ ಕರಗಿಹೋದ
ಆಕಾರವ ಕೆತ್ತಿ ನೋಡು

ಸರಳರೇಖೆ ಕರ್ತವ್ಯದ ಹಾದಿ
ಅದನೂ ಪೂರ್ಣ ತಿಳಿ
ಚೆಲುವಿನ ಪಥ ಗತಿ
ವಕ್ರ ಸುಳಿ

ವಕ್ರ ವಕ್ರ ಸುಳಿ
ಸುಳಿ ಸುಳಿ ಸುಳಿ ಶೂನ್ಯ
ಬಿಂದು ಬಿಂದು ಬಿಂದು
ಏನು ಚಿತ್ರಿಸಲಿ ಕೆತ್ತಲಿದೊರೆಯೇ
ಮಂಕಾದೆನು ಇಂದು
ಜನ್ಮ ಜನ್ಮಗಳ ಪರಿಭ್ರಮಣದಲಿ
ಇಲ್ಲಿ ತನಕ ಬಂದು

ಆದರೂ
ಈ ಗಾಳಿಯ ಬೆನ್ನ ಮೇಲೆ
ಮೂರ್ತಿಯೊಂದ ಕೆತ್ತಬೇಕು

*(ಆಧಾರ : ವಿ. ಜಿ. ಭಟ್‌ರ ಆಯ್ದ ಕವನಗಳು)*

# ವ್ಯಕ್ತಿ

✍ ಗೌರೀಶ್ ಕಾಯ್ಕಿಣಿ

'ವ್ಯಕ್ತಿ' ಶಬ್ದ ಬಳಕೆ ನಮ್ಮ ಭಾಷೆಗಳಲ್ಲಿ ಇತ್ತೀಚಿನದು. ಇಂಗ್ಲಿಷ್ Individual ಎಂಬ ಶಬ್ದಕ್ಕೆ ಪರ್ಯಾಯವಾಗಿ ಬಳಸಲಾಗುತ್ತಿದೆ. ಆದರೆ ಆ ಇಂಗ್ಲಿಷ್ ಶಬ್ದಕ್ಕೂ ಈ ಸಂಸ್ಕೃತ ಶಬ್ದಕ್ಕೂ ಅರ್ಥದಲ್ಲಿ ಸಾಕಷ್ಟು ಭೇದವಿದೆ. Individual ಶಬ್ದವು Indivisible ಶಬ್ದದಂತೆಯೇ. Divide ಎಂದರೆ ವಿಭಾಗಿಸು. ಯಾವುದನ್ನು ಇನ್ನು ವಿಭಾಗಿಸಲು ಆಗದೋ ಅದು Indivisible ಅವಿಭಾಜ್ಯ. ಅದೇ Individual ಇಡಿಯಾದ ಭಾಗ, ಸಮೂಹದ, ಸಮಾಜದ ಒಂದು ಬಿಡಿಭಾಗ Individual.

ಆದರೆ ವ್ಯಕ್ತಿ? ವ್ಯಕ್ತವಾಗುವ, ಪ್ರಕಟವಾಗುವ ಗುಣ,ಲಕ್ಷಣ ಒಡೆದದ್ದು ಕಾಣುವ ಗುಣ ಅದೇ ವ್ಯಕ್ತಿತ್ವ. ಹೀಗೆ ಕಂಡು ಬರುವವನೇ ವ್ಯಕ್ತಿ. (ಮೂಲ ಸಂಸ್ಕೃತದಲ್ಲಿ 'ವ್ಯಕ್ತಿ' ಅಂದರೆ ವ್ಯಕ್ತವಾಗುವಿಕೆ. ಉದಾ. ಅಭಿವ್ಯಕ್ತಿ Expression ವ್ಯಕ್ತಿ ಅಂದರೂ ಅಭಿವ್ಯಕ್ತಿಯೇ) ನಮ್ಮಲ್ಲಿ ಅನೇಕರು ಒಂದು ಗುಂಪಿನಲ್ಲಿ ಬೇರೆಯಾಗಿ ಎದ್ದು ಕಾಣುವುದೇ ಇಲ್ಲ. ಇತರರ ಗಮನಕ್ಕೆ ಬರುವುದಿಲ್ಲ. ಇವರು ಮಂದೆಯಲ್ಲಿ ಒಂದಾಗುವ ಮಂದಿ. ಆದರೆ ವ್ಯಕ್ತಿತ್ವವುಳ್ಳ ವ್ಯಕ್ತಿ ಹಾಗಲ್ಲ. ಹಿಂದೆ ಮೋತಿ ನೆಹರೂ ಅವರ ಬಗೆಗೆ ಹೇಳುತ್ತಿದ್ದರು. ಆತ ಮೇಜಿನ ಯಾವ ಬದಿಗೂ, ಮೂಲೆಗೂ ಕೂತಿರಲಿ, ಅದೇ ಮುಖ್ಯ ಕುರ್ಚಿಯಾಗುತ್ತಿತ್ತು. ಸುತ್ತ ಕೂತವರೆಲ್ಲಾ ಆ ಕಡೆಗೇ ನೋಡುತ್ತಿದ್ದರು.

ವ್ಯಕ್ತಿತ್ವವೆಂಬುದು ಹೀಗೆ ಇತರರ ಕಣ್ಣಿನಲ್ಲಿ ಮಾನ್ಯತೆ ಪಡೆಯುವ ಲಕ್ಷ್ಯ. ವ್ಯಕ್ತವಾದವನೇ ವ್ಯಕ್ತಿ ಅಂದಾಗ ನಾವು ವ್ಯಕ್ತವಾಗುವುದು ಇತರರಿಗೆ. ನಮ್ಮ ವ್ಯಕ್ತಿತ್ವ ರೂಪುಗೊಳ್ಳುವುದು ಪರರ ನಡುವೆಯೇ. ಪರರ ನೋಟ ದಲ್ಲಿಯೇ, ಇತರರ ಎದುರಿಗೇ ಅಡವಿಯಲ್ಲೋ, ಮರುಭೂಮಿಯಲ್ಲೋ, ಗವಿಯಲ್ಲಿಯೋ ಒಂಟಿಯಾಗಿ ಬದುಕುವ ಜೀವಿ ವ್ಯಕ್ತಿಯಾಗಲಾರ. ವ್ಯಕ್ತಿತ್ವ ವನ್ನು ಪಡೆಯಲಾರ.

ಆದ್ದರಿಂದ ನಾವು ಒಬ್ಬ ವ್ಯಕ್ತಿಯಾಗಿ ಅರ್ಥಪೂರ್ಣವಾಗುವುದು ನಾವು ಬದುಕುವ ಸಮಾಜದಲ್ಲಿ. ಸಮಾಗಮದಿಂದಲೇ ಸಮಾಜ. ಇಲ್ಲವಾದರೆ ಅದೊಂದು ಸಮಜ (ಸಮಜ ಎಂದರೆ ನಾಯಿಗಳ ಹಿಂಡು). ನಮ್ಮ ಮಾನವೀಯತೆ ಸಾರ್ಥಕವಾಗುವುದೇ, ಸಿದ್ಧವಾಗುವುದೇ ಮನುಕುಲದ ಇತರ ಸಮಾಜಧರ್ಮಿಗಳ ನಡುವೆ. ಅವರೊಂದಿಗೆ ನಮ್ಮ ಸಂಬಂಧ ಹಗೆತನವೇ ಇರಲಿ, ಗೆಳೆತನವೇ ಇರಲಿ ಆ ಸಂಪರ್ಕವಿಲ್ಲದೇ ನಮಗೆ ಮನುಷ್ಯತ್ವವಿಲ್ಲ. ವ್ಯಕ್ತಿಯಾಗಿ ನೆಲೆಯೂ ಇಲ್ಲ, ಬೆಲೆಯೂ ಇಲ್ಲ.

ಬ್ರಹ್ಮಾಂಡವೂ ಸೃಷ್ಟಿ ಪ್ರಪಂಚವೂ ನಿಂತಿರುವುದೇ ಗ್ರಹ-ಗ್ರಹಗೋಲಗಳ ಅನ್ಯೋನ್ಯ ಆಕರ್ಷಣೆಯಿಂದ. ಬಿಡಿಯಾದ ಬದುಕಿಗೆ ಅಸ್ತಿತ್ವವೇ ಇಲ್ಲ. ಅದು ಬದುಕೇ ಅಲ್ಲ. ಬರಿ ಇರುವಿಕೆ ಬದುಕಲ್ಲ. ಆಗುವಿಕೆ ಇಲ್ಲದಿದ್ದರೆ ಇರುವಿಕೆ ವ್ಯರ್ಥ. ಆಗಲಿಕ್ಕೆ ನಮ್ಮಂಥ ಇತರರ ಒಡನಾಟ ಅಗತ್ಯ. ಒಂಟೆಗೂ ಕಾರವಾನದಲ್ಲಿಯೇ ಸ್ಥಾನ ಮತ್ತು ಸ್ವಾಸ್ಥ್ಯ.

ನಪುಂಸಕನು ಬ್ರಹ್ಮಚಾರಿಯಾಗಲಾರ. ಹೆಣ್ಣಿನ ಸಂಗವನ್ನು, ಮೋಹ ವನ್ನು ಗೆದ್ದವನೇ ಬ್ರಹ್ಮಚಾರಿ. ಹಾಗೆಯೇ ಜನರ ನಡುವೆ, ಪರರೊಡನೆ ಬಾಳಲು ಬಲ್ಲವನದೇ ವ್ಯಕ್ತಿತ್ವವು ಮಾರ್ಪಡುತ್ತದೆ. ಆದ್ದರಿಂದ ನಾಣ್ಯದ ಬೆಲೆ ಕಟ್ಟುವುದು ಅದರ ವಿನಿಮಯದಲ್ಲಿಯೇ. ನಾವು ಪ್ರಾಮಾಣಿಕರೂ, ನಿಸ್ಪೃಹರೂ, ನೀತಿವಂತರೂ - ಎಂದು ನಮ್ಮ ನಮ್ಮ ಮಟ್ಟಿಗೆ ನಾವು ಭಾವಿಸಿಕೊಂಡರೆ ಸಾಲದು. ಸುತ್ತಲಿನ ಸಮಾಜವು ಹತ್ತಿರದ ಆಪ್ತೇಷ್ಟರು ಅದನ್ನು ಗುರುತಿಸಬೇಕು. ನಾವು ನ್ಯಾಯನಿಷ್ಠರೆಂದು ಪರರಿಗೆ ಮನವರಿಕೆಯಾಗಬೇಕು.

'ಮನುಪೂತಂ ಸಮಾಚರೀತ್' ಅಂದಿದ್ದಾನೆ ಮನು. ಇದು ಸರಿ ಆದರೂ ನಮ್ಮ ಮನಸ್ಸಿಗೆ ಸರಿಕಂಡಿದ್ದೇ ನಮ್ಮ ನಡತೆಗೆ ಬಲವನ್ನು ನೀಡದ್ದು. ಅದಕ್ಕಾಗಿ ಹುತಾತ್ಮನಾಗುವುದಾದರೆ ಅದು ಬೇರೆ. ಆದರೆ ಮನುಷ್ಯನಿಗೆ ಆತ್ಮತೃಪ್ತಿಯೊಂದೇ ಸಾಕೇ. ಲೌಕಿಕವಾಗಿ ಬದುಕುವವನಿಗೆ ಲೋಕಮತದ ಪರಿವೆ ಬೇಡವೇ?

*(ಆಧಾರ : ಗೌರೀಶ್ ಕಾಯ್ಕಿಣಿಯವರ ಬೆಲೆ ಬಾಳುವ ಬರೆಹಗಳು)*

---

# ಗುಲ್‌ಮೋಹರ್

**- ಅಮಿತಾ ಎಸ್. ಭಾಗವತ್**

ಪಲ್ಲಕ್ಕಿಯನೇರಿ ಬಂದ ಮದುಮಗಳು
ಲಜ್ಜೆಯಿಂದಲೇ ಮುಖ ಮುಚ್ಚಿಕೊಂಡಂತೆ
ಅತ್ತರದಾನಿಯಲ್ಲಡಗಿದ ಪರಿಮಳ
ರಾಶಿ ಹೂಗಳ ಕಂಡು ಆರಿ ಹೋದಂತೆ

ಹಾರಿ ತೇಲುವ ಬಿಸಿಲಿನ ಸೆರಗಿಗೆ
ಹೆಣೆದಂತೆ ಕೆಂಪು ಚಿತ್ತಾರ
ಹಳದಿ ಚಾಮರದ ಬೀಸುಗಾಳಿಗೆ
ಕಾವಿನಲೂ ಹೊಳೆದಂತೆ ಬಂಗಾರ

ಶ್ರೇಷ್ಠ ಶಿಲ್ಪಿಯ ಕೈ ಚಳಕದಂತೆ
ಮರವಿದು ಕಲೆಯ ಕುಸುರು
ಸ್ವಾಗತ ಕೋರುವ ಕಮಾನಿನಂತೆ
ಗುಲ್‌ಮೋಹರ್ ನಿನಗಿಟ್ಟ ಹೆಸರು

ಬೇಸಿಗೆಯ ಕಡಗೋಲಿನಲಿ ಹೊಂಗನಸು
ಮಂಥನದಲಿ ಉಕ್ಕಿದಂತೆ ನವನೀತ
ಹೂವಾದರೂ ಗಡಸು, ಬಂದಂತೆ ನೆಗೆಸು
ನಾಳೆಯ ಚಿಂತೆಯಿಲ್ಲದೆ ಬರಿದಾಗುತ

ಹಿಂಜೆರೆಳೆಯಂತೆ ಹಾರಿ ಬಂದು
ಮುತ್ತಿಕ್ಕಿ ಕೆಳಗುರುಳುವ ತವಕ
ಜಾರಿ ಬಿದ್ದರೂ ನೋವಾಗಿಲ್ಲವೆಂದು
ರತ್ನಗಂಬಳಿ ನೇಯುವ ಪುಳಕ

*(ಕುಮುದಾಳ ಭಾನುವಾರ ಕವನ ಸಂಕಲನದಿಂದ)*

## DONATIONS

### HAVYAKA WELFARE TRUST

| | | |
|---|---|---|
| 1. | Lt. Col. N. G. Hegde | Rs. 50,000 |
| 2. | Vigneshwar Bhat | Rs. 2,000 |
| 3. | Sadananda Hegde katte | Rs. 1,100 |

*PAGE DONATED BY : **SMT. SHANTA V. HEGDE,** CARMICHAEL ROAD*

# MORE ON JUST SMILE

✍ L. V. Shastri, Bangalore

'Just Smile' forming the editorial page in HAVYAKA SANDESHA of April 2016 was a refreshing reminder regarding the desirability of smile in our lives. As brought out there in, times may change, yet the importance of smile continues unchanged, while newer modes of bringing the smile may come in. It is said about the great river Nile: 'men may come, men may go but I go on for ever'. Smile, like Nile, would also enjoy immutable quality.

Dictionary defines smile as 'a facial expression characterized by an upturning of the corners of the mouth'. Well, this may sound like a rather dry way to describe a soft thing, thereby inviting instant smile and, of course, costing zero. Over centuries and millennia and across continents smile has caught the imagination of writers and artists. Eulogies are heaped on tabassum in Urdu shayaries. Damsels with bewitching smiles have been a part of sculpture in prestigious buildings and public places throught globe. In India danseuse radiating smile have been part of temple sculpture at many places. Smile has been a prominent feature in paintings. The smile of Mona Lisa is one of the works that immortalized its artist Leonardo da Vinci, so on and so forth. The patronage that smile has consistently enjoyed is of course because it has the quality to be infectious, smile begetting smile.

Smile also happens to be a handle / topic to philosophize - in Satsungs and other spiritual discourses. We are taken to the ever present smile on the face of a baby. It is said to represent the nascent and pure form of Ananda, which is believed to be the true nature of God, the creator, who has liberally presented so much beauty and bounty everywhere, for everyone.

Well, we are living in present times where significant departure from the past 'culture' is discernible. Persuit of art and craft for their own sake and as vocation may not be as paying as before. New avenues for career options have opened up. Presenting pleasing and attractive smile itself has become a part of vocation called modeling, not without the elements of competition that any vocation presents.

While some faces are blessed with ever present smile, majority of the faces are not that fortunate. The latter type may not present a sad looking face but they smile at all only with difficulty. They do not readily respond to 'smile please' call by the photographer. Of course there could be background reasons and factors for this situation. However, no one likes to be deprived of the jest aspect of living for long. Owing to this, another member in the smile family, namely laughter, enters the scene, helping all and sundry to unburden.

While smile is soft and silent laughter is nothing but its louder sibling. No limit can be prescribed for its loudness! While smile is a reflection of pleasant attitude and disposition, laughter springs from the ever welcome entity called humor. We see books specializing in jokes 'selling like hot cakes'. Laughter, born of good humor, has little to do with the attitude or disposition of an individual. Like smile, laughter also has the quality to be infectious. The PT teacher mutters something and a couple of boys nearby start laughing, inducing other boys in the line to join the laughing. It is like fire spreading in a chain of phatakas. Many times, I laughed just because others around were laughing, deriving a sense of well-being thereby, at no cost. Same, I guess, could apply to many.

No one would question the validity of the saying 'Laughter is the best medicine'. We thus have 'doctors' - the humorists / comedians - who are both loved and respected wherever they go. As we know, even in ancient dramas of kalidasa and others the jester, Vidushaka, enjoyed prominent role. He would be there on the stage, either alone or standing in one corner of the stage while the main characters occupy center stage. In either case, he has but one singular job on hand, regaling the audience with funny jestures and humor filled words. That was being done even when the drama would take on a sad or even tragic theme at some point in time! Blissfully, even today we have 'Vidushakas' in many forms of folk drama like Yakshagana, where he is called kodangi. Yakshagana without kodangi would be a frustration for the audience! Sometimes, Vidushaka / kodangi is made to be in dialogue with one or more characters in the drama. This additional role assigned to the jester would also help in taking some jumps (leap frogging) in the main story of the drama, helping thereby the director to draw the curtain at allotted time.

One may not be blessed with the quality to wear a smile. So what? He or she should have little problem in joining a laughter session arising from humor. From health point of view also the act of laughing is taken to be a good exercise for the lungs. That is probably why compulsory laughing is seriously undertaken in the laughter clubs.

So, ladies and gentlemen, let us try to develop smile as part of our facial gear, even if it means practicing in front of a mirror regularly and religiously. Else, let us be laughing whenever and wherever at all possible!

Hope this addendum to 'Just Smile' is worth a smile or two?

*PAGE DONATED BY : **SMT. MADHU HEGDE,** SANTACRUZ*

***<u>ಮುಂಬಯಿ ನೆನಪು</u>***

# ಮನಸು ಮಾತಾಡ್ಡಾಗ

ಎರಡು ವರ್ಷಗಳು!!! ಅಬ್ಬ, ಮೊನ್ನೆಯಷ್ಟೇ ಸ್ವಲ್ಪ ಕುತೂಹಲ ಬೆರೆತ ಹಿಂಜರಿಕೆಯಿಂದ ಮುಂಬೈ ಎನ್ನುವ ಬೃಹತ್ ಮಾಯಾನಗರಿಗೆ ಬಂದಂತೆ ನೆನಪು. ಕೆಲವೊಮ್ಮೆ ಎಷ್ಟು ಬೇಗ ವರ್ಷಗಳು ಉರುಳಿ ಹೋದವಲ್ಲ ಎಂದೆನಿಸಿ ಹಿಂದಿರುಗಿ ನೋಡಿ ಅವಲೋಕಿಸಿದರೆ, ಎಷ್ಟೇ ಬೇಗ ದಿನ ಕಳೆದೆನೆನಿಸಿದರೂ ಅನುಭವದ ಮೂಟೆಯಂತೂ ಬೆನ್ನಿಗಿದೆ ಎಂಬ ಧೈರ್ಯ.

ಫೆಬ್ರವರಿ 12, 2013 ನೇ ತಾರೀಕು ಮೊಟ್ಟ ಮೊದಲು ಮುಂಬಯಿ ನನ್ನನ್ನು ಕರೆಸಿಕೊಂಡಿದ್ದು, ಕಾಲೇಜಿನ ಕ್ಯಾಂಪಸ್ ಇಂಟರ್‌ವ್ಯೂ HR ಸುತ್ತಿನಲ್ಲಿ ಮೊದಲು ಕೇಳಿದ್ದ ಪ್ರಶ್ನೆಯೇ ಇದು - Are you comfortable with relocation to any of the state in India? ಈ ಪ್ರಶ್ನೆಗೆ ನನಗೆ ತಿಳಿದಂತೆ ಯಾವೊಬ್ಬ ವಿದ್ಯಾರ್ಥಿಯೂ no ಎಂದು ಉತ್ತರಿಸಿರಲಾರ. ಮೊದಲು ಸೆಲೆಕ್ಟ್ ಆಗೋಣ ಈ ಕಂಪನಿ ಸೇರುವುದು ಬೀಡುವುದು ಮುಂದಿನ ವಿಚಾರ ಎಂದೇ ಎಲ್ಲರೂ ಯೋಚಿಸುವುದು. ಅಂತೆಯೇ ನಾನು ಎದೆಯುಬ್ಬಿಸಿ Yes ಎಂದಿದ್ದೆ.

ಅಸಲಿಗೆ ಮುಂಬಯಿಗೆ ಪೋಸ್ಟಿಂಗ್ ದೊರಕಿದಾಗ ನನಗೆ ಸಂತೋಷವೇ ಆಗಿತ್ತು. ಹೊಸ ಊರು, ಅಲ್ಲಿನ ಸಂಪ್ರದಾಯಗಳು ಜನರ ವಿಚಾರ ಲಹರಿಗಳ ಬಗ್ಗೆ ಕುತೂಹಲ ಅಲ್ಲದೆ ಬೆಂಗಳೂರಿನಲ್ಲಿ ರುವ ಎಲ್ಲ ಸಂಬಂಧಿಕರ ರಗಳೆಗಳಿಂದ ದೂರ ಉಳಿಯಬಹುದೆಂದು ಅಂದುಕೊಂಡಿದ್ದೆ. ಸರಿ, ಬಂದದ್ದಾಯಿತು.ಇನ್ನು ಎಲ್ಲಿ ಉಳಿಯುವುದು ಎಂದು ಪರಿಚಯದವರಲ್ಲಿ ವಿಚಾರಿಸಿದಾಗಲೇ ತಿಳಿದದ್ದು ಇಲ್ಲಿಯ ಮುಂಬಯಿ ಹವ್ಯಕ ಟ್ರಸ್ಟ್‌ನ ಬಗ್ಗೆ.

ಹೌದು. ಇಲ್ಲಿಯೂ ನಮ್ಮ ಹವ್ಯಕರಿದ್ದಾರೆ. ಒಟ್ಟಿಗೆ ಒಂದೇ ಪರಿವಾರದವರಂತೆ ಒಗ್ಗಟ್ಟಿನಿಂದ ಕೂಡಿದ್ದಾರೆ. ಹವ್ಯಕ ಟ್ರಸ್ಟ್ ಕಟ್ಟಿ ಬೆಳೆಸಿದ್ದಾರೆ. ಟ್ರಸ್ಟ್‌ನ ಬಗ್ಗೆ ಮತ್ತೂ ಸ್ವಲ್ಪ ವಿಚಾರಿಸಿದಾಗ ತಿಳಿಯಿತು- ಡೊಂಬಿವಲಿ ಮೆಡಿಕಲ್ ಸೆಂಟರ್‌ನಲ್ಲಿ ನನ್ನಂತೆ ಧಿಡೀರನೆ ಮುಂಬಯಿಗೆ ಬಂದ ಹುಡುಗರಿಗೆ ಇರುವ ವಸತಿ ವ್ಯವಸ್ಥೆ ಬಗ್ಗೆ. ಸೀಟು ಖಾಲಿ ಇರುವುದು ತಿಳಿದಾಗ ಸಂತೋಷವೂ ಆಯಿತು. ಒಡನೆಯೇ ಸದಸ್ಯತ್ವ ಹಣ ಪಾವತಿಸಿ ಮುಂಬೈ ಹವ್ಯಕ ಸಂಘಕ್ಕೆ ಸೇರಿದ್ದೂ ಆಯಿತು.

ಮೂರು ವರ್ಷಗಳನ್ನೂ ಇಲ್ಲಿಯೇ ಕಳೆದಿದ್ದೇನೆ. ಮೂರ್‍ನಾಲ್ಕು ಜನರಿಗೆ ಉಳಿಯಲು ಬೇಕಾಗುವಂತಹ ಎಲ್ಲ ಸೌಕರ್ಯಗಳೂ ಇಲ್ಲಿವೆ. ಸಾಲದೆಂಬಂತೆ ಈಗ ಫ್ಲಾಟನ್ನು ಇನ್ನಷ್ಟು ನವೀಕರಣಗೊಳಿಸುವ ಕಾರ್ಯವೂ ನಡೆಯುತ್ತಿದೆ. ಅದೃಷ್ಟವಶಾತ್ ಜಾಗ ಸಿಕ್ಕರೆ ಇಲ್ಲಿ ಇರುವಷ್ಟು ದಿನವೂ ನಿಶ್ಚಿಂತೆಯಿಂದ ಯಾವ ರೆಂಟ್ ಬ್ರೋಕರ್ ಗಳ ತಂಟೆ ಇಲ್ಲದೆ ಆರಾಮವಾಗಿ ಇರಬಹುದು.

ಅಲ್ಲದೇ ಈ ಹವ್ಯಕ ಟ್ರಸ್ಟ್ ವತಿಯಿಂದ ಹಲವಷ್ಟು ಸಭೆ ಸಮಾರಂಭ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ವಾರ್ಷಿಕ ಪಿಕ್ನಿಕ್ ಹಮ್ಮಿಕೊಳ್ಳಲಾಗುತ್ತದೆ. ಅಂತೆಯೇ ಭಾನುವಾರದ ಸಂಜೆ ಭಜನೆ ನಡೆಯುತ್ತದೆ. ಇವೆಲ್ಲದರ ನಡುವೆ ನಮ್ಮ ಮನೆ ನಮ್ಮ ಊರಿನಿಂದ ದೂರವಿದ್ದೇನೆಂಬ ಭಾವನೆ ದೂರವಾಗಿ ನಮ್ಮವರ ನಡುವೆಯೇ ಇರುವ ಭಾವ ಮೂಡುತ್ತದೆ.

ಇಷ್ಟೆಲ್ಲವನ್ನು ಕೊಟ್ಟು ಮನೆ ಮಗನಂತೆ ನನ್ನನ್ನು ನೋಡಿಕೊಂಡ ಹವ್ಯಕ ಟ್ರಸ್ಟ್ ಮತ್ತು ಅದರ ಎಲ್ಲ ಸದಸ್ಯರಿಗೆ ಧನ್ಯವಾದ ಹೇಳುತ್ತಾ, ಭಾರವಾದ ಮನಸ್ಸಿನಿಂದ ಮುಂಬಯಿ ಬಿಟ್ಟು ಹೊರಡುತ್ತಿದ್ದೇನೆ. ಹೊರಡುವ ಮುನ್ನ ಮೂರು ವರ್ಷದ ಮುಂಬಯಿ ಜೀವನದ ಸವಿನೆನಪಿನ ದಿನಗಳನ್ನು ನೆನೆಯುತ್ತಾ....

ಇಂತಿ,
ಪ್ರೀತಿವರ್ಧನ ಭಟ್
(ಫೆ. 9, 2016)

---

# Mumbai Memory

I would like to place my note of thanks to Havyaka Welfare Trust for the immense help they have provided to me here at Mumbai. Its been great to know people that too from Havyaka Welfare Trust in a place of like Mumbai for close to 30 Months.

When I was first posted in Mumbai, I didn't know where abouts of the city and had heard Mumbai to be a busy fast moving place. I first thought it would be difficult to find a decent accomodation, but our Havyaka Welfare Trust provided me with shelter at Dombivali for a more than reasonable price with great facilities and few friends who had come to Mumbai with same dreams and ambitions as I did.

There is a paritcular incident which I would like to mention. It was only two months into my tenure in Mumbai. I was not acclamatized to the heat here due to which I suffered a sunstroke and did faint near Dombivali station. People and members of Havyaka Welfare Trust were with me during difficult period. So I can safely say that Havyaka Welfare Trust have been a family away from home.

Now that my time is up here in Mumbai and will be leaving to embrace a new adventure. I would like to thank you heartfully for being there for my good times and bad times during my tenure in Mumbai. You will always be remembered by me. Continue helping aspiring young Havyaka Community members who come to Mumbai and bring the best out of them just like you did with me. I will also be involved with the activities of Havyaka Welfare Trust and would help as much as I can for the growth of this Trust, which I am sure will grow bigger and greater Heights.

Thanking you,
**Vighneshwar Bhat**

*PAGE DONATED BY : **SHRI V. G. BHAT, NIGDI***

# ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ

# HAVYAKA WELFARE TRUST, MUMBAI

## 'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಪ್ರಶಸ್ತಿ ಪ್ರದಾನ ಸಮಾರಂಭ – 2016

## "Karki Venkataramana Shastri Suri" Award Presentation Ceremony - 2016

**DATE : 26-6-2016 TIME : 10.00 A.M. onwards**

**Venue : Havyakara Sabhagraha,** Dipti Solitaire, 4th Floor, M. G. Road & L.B.S. Marg Junction, Opp. Post Office, Ghatkopar (W), Mumbai - 400 086.

ಸಹಕಾರ / **Co-operation** — ಕರ್ನಾಟಕ ಮಲ್ಲ, ಕನ್ನಡ ದೈನಿಕ, ಮುಂಬೈ
**Karnataka Malla, Kannada Daily News Paper, Mumbai**

ಪ್ರಶಸ್ತಿ ಪಾತ್ರರು / **Awardee** — ಡಾ| ವ್ಯಾಸರಾವ್ ನಿಂಜೂರ್ (ಖ್ಯಾತ ಸಾಹಿತಿ)
**Dr. VYASARAO NINJOOR (Eminent Writer)**

ಮುಖ್ಯ ಅತಿಥಿಗಳು / **Chief Guest** — ಶ್ರೀ ವಿಷ್ಣು ಭಟ್ಟ ಪಾದೇಕಲ್ (ಕನ್ನಡ ಸಂಸ್ಕೃತ ವಿದ್ವಾಂಸರು, ಸಂಶೋಧಕರು)
**Shri VISHNU BHAT PADEKAL (Kannada Sanskrut research Scholar)**

ಗೌರವ ಅತಿಥಿಗಳು / **Guests of Honour** — ಶ್ರೀ ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕರು, ಕರ್ನಾಟಕ ಮಲ್ಲ)
**Shri CHANDRASHEKHAR PALETTADI (Editor, Karnataka Malla)**
ಶ್ರೀ ಶಿಮುಂಜೆ ಪರಾರಿ (ಸಾಹಿತಿ, ನಾಟಕಕಾರರು)
**Shri SHIMUNJE PARARI (Eminent Writer, Dramatist)**
ಶ್ರೀ ಭರತ್‌ಕುಮಾರ ಪೊಲಿಪು (ರಂಗತಜ್ಞ)
**Shri BHARATKUMAR POLIPU (Drama Artist)**

ಅಧ್ಯಕ್ಷತೆ / **Chairperson** — ಶ್ರೀ ಶಿವಕುಮಾರ್ ಭಾಗವತ್ (ಅಧ್ಯಕ್ಷರು ಹವ್ಯಕ ವೆಲ್ಫೇರ್ ಟ್ರಸ್ಟ್)
**Shri SHIVKUMAR BHAGWAT (President Havyaka Welfare Tust)**

### ಕಾರ್ಯಕ್ರಮಗಳ ವಿವರ / Programme Details

ಪ್ರಶಸ್ತಿ ಪ್ರದಾನ ಸಮಾರಂಭ ಬೆಳಿಗ್ಗೆ 10.00 ರಿಂದ 12.00 / **Award presentation : 10.00 a.m. to 12.00 Noon**

ಕನ್ನಡ ಜಾನಪದ ಗೀತೆಗಳ ಸ್ಪರ್ಧೆ (ಮುಂಬೈ ಕನ್ನಡಿಗರಿಗಾಗಿ) / **Kannada Folk Songs Competition /**
(ನಿಯಮಾವಳಿಗಳು ಮೂರನೆ ಪುಟದಲ್ಲಿ / **Rules in third page**)
ಮಧ್ಯಾಹ್ನ 12.00 ರಿಂದ 1.30 ರವರೆಗೆ / **12 noon to 1.30 p.m.**

ಭೋಜನ ವಿರಾಮ : 1.30 ರಿಂದ 2.30 / **Lunch Break : 1.30 p.m. to 2.30 p.m.**

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು / **Cultural Programme**

**'ಕಿಶೋರಿ ಯಕ್ಷ ರೂಪಕ' / Kishori Yaksha Roopaka**
ಕುಮಾರಿ ತುಳಸಿ ಬೆಟಕೊಪ್ಪ ಇವರಿಂದ : 3.00 ರಿಂದ 4.00 / **by Kumari Tulsi Betkoppa : 3.00 to 4.00 p.m.**

*ತಾವೆಲ್ಲರೂ ಬಂಧು-ಮಿತ್ರರೊಂದಿಗೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.*

| ಶಿವಕುಮಾರ ಭಾಗ್ವತ್ (ಅಧ್ಯಕ್ಷರು) | ಎನ್. ಆರ್. ಅಕದಾಸ (ಗೌ| ಕಾರ್ಯದರ್ಶಿ) | ತನುಜಾ ಹೆಗಡೆ, ಕೇಶವ ಹೆಗಡೆ (ಸಂಚಾಲಕರು, ಕೆ.ವಿ.ಎಸ್.ಎಸ್.) |
|---|---|---|

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT (DEC. 2012)***

# NEW MEMBERS

| No. | Name & Address | Native | Phone / Email |
|---|---|---|---|
| LM/1502 | Hegde Panduranga Ganapati<br>Appikoppa<br>P. O. Onikeri - (Banavasi), Sirsi<br>N. K. Karnataka - 581 318 | Kalgundikoppa<br>Sirsi<br><br>. | 9448818099<br>panduhegde@gmail.com |
| LM/1503 | Mrs. Hegde Geeta Balachandra<br>Dheeraj Upavan CHS, II - D, 606<br>Opp. Gayatri Mandir, Borivali (E),<br>Mumbai - 400 068. | Kadle<br>Holanagadde | 9867454803<br>hegdegeeta01@gmail.com |
| LM/1504 | Bhat Sadashiv Shankar<br>'Abhilasha', Opp. Primary School<br>Chitrigi-Kumta. N. K. - 581 343. | Chitrigi<br>Kumta | 9448842188 |
| LM/1505 | Bhat Shankar Prakash<br># 188, Near Murror Bus Stand,<br>P. O. Muroor, Kumta.N.K.<br>Karnataka - 581 362. | Muroor-Kumta | 9036101059 |
| LM/1506 | Hegde Ramesh M.<br>No- 601, C - Wing, Rashmi Garden,<br>Evershine City, Vasai (E) - 401 205. | Karki saval<br>Siddapur | 9699060893<br>rmramesh1@rediffmail.com |
| LM/1507 | Bhat Savita Timmappa.<br>'Pranava', 838 / 1,<br>Sannahegdekeri,<br>Karki Honnavar,<br>U. K. Karnataka - 581 341. | Karki | 08277113803<br>08387-236030 |
| LM/1508 | Bhat Ganesh Timmappa<br>Pranava', 838 / 1,<br>Sannahegdekeri,<br>Karki Honnavar,<br>U. K. Karnataka - 581 341. | Karki | 08387-236030 |
| LM/1509 | Kamte Gopal V.<br>102, Eden Gardens,<br>5th Cross Road, I. C. Colony,<br>Borivali (W), Mumbai - 400 103. | Kamte Gokarna | 9820093771 |
| LM/1510 | Hegde Ganesh M.<br>Shiv Nivas, A / 7, S. B. Marg<br>Matunga (W), Mumbai - 400 016. | Sureemane<br>Sirsi | 9930935264<br>hegde.ganesh @yahoo.co.in |
| LM/1511 | A. P. Subbayya<br>Flat No.12, Plot - 13,<br>Shri Krishnamurti CHS,<br>Gandhi Nagar,<br>Dombivali (E) - 421 204. | Aryapu<br>Puttur | 9323551330<br>subbayya @hotmail.com |

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri ,** Past President, H.W.T.*

*'Havyaka Sandesha' June 2016*

***RNI NO. MAHBIL / 2000 / 746,***
***Postal R.NO. MCN/161/2015-2017***
***WPP License No. MR / Tech / WPP-130 / North / 2016***
***'Licence to post without prepayment'***

| | | |
|---|---|---|
| ***Posted at Mumbai Patrika Channel Stg. Office Mumbai - 400 001***<br>**Date of Publication : 1st of every month** | **REGISTERED NEWSPAPER** | **Date of Posting :**<br>**2nd, 3rd of every month** |
| ***If undelivered, please return to :***<br>**HAVYAKA WELFARE TRUST**<br>B-207, Valmiki Apts., Near Pharmacy College,<br>Sundar Nagar, Kalina, Vidyanagari P. O.,<br>Mumbai - 400 098. ✆ 2665 2591<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Narayan Akadas R.<br>for Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | **To,** | |


# ಸಂಕ್ಷಿಪ್ತ ಸುದ್ದಿಗಳು

## ಪ್ರಜ್ಞಾ ಮತ್ತಿಹಳ್ಳಿಯವರಿಗೆ ವಿಭಾ ಪ್ರಶಸ್ತಿ



ಪ್ರಜ್ಞಾ ಮತ್ತಿಹಳ್ಳಿಯವರು ಬರೆದ 'ಕಾಲನ ಕಾಲಂದುಗೆ' ಕವನ ಸಂಕಲನವು 2015ರ ಸಾಲಿನ ವಿಭಾ ಸಾಹಿತ್ಯ ಪ್ರಶಸ್ತಿಗೆ ಪಾತ್ರವಾಗಿದೆ.

1969 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಜನಸಿದ ಪ್ರಜ್ಞಾ ಮತ್ತಿಹಳ್ಳಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಎಂ. ಕಾಂ., ಪಿಎಚ್‌ಡಿ ಪದವಿ ಪಡೆದು, ಪ್ರಸ್ತುತ ವಾಣಿಜ್ಯ ಶಾಸ್ತ್ರದ ಉಪನ್ಯಾಸಕಿಯಾಗಿ ಧಾರವಾಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 'ಹುಡುಗಿ ನಕ್ಕಾಗ' ಮತ್ತು 'ಮೊನ್ನೆ ದೀಪ ಸಾಲು' ಎಂಬೆರಡು ಕವನ ಸಂಕಲನಗಳು. 'ಗಂಧಗಾಳಿ' ಅಂಕಣ ಬರಹ ಸಂಕಲನ, 'ಮಿನುಗೆಲೆ ನಕ್ಷತ್ರ' ಪ್ರಬಂಧಗಳ ಸಂಕಲನ, 'ದೇವರ ಸ್ವಂತ ನಾಡಿನಲ್ಲಿ' ಪ್ರವಾಸ ಕಥನದ ಕೃತಿಗಳು ಈಗಾಗಲೇ ಹೊರಬಂದಿದೆ. ಪ್ರಜಾವಾಣಿ ಕವನ ಸ್ಪರ್ಧೆಯಲ್ಲಿ ಪ್ರಥಮ, ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಹಾಗೂ ವಿಜಯವಾಣಿ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನಗಳನ್ನು ಪಡೆದಿದ್ದಾರೆ. ಅನೇಕ ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಪ್ರಜ್ಞಾ, ಸಹ್ಯಾದ್ರಿ ಮಕ್ಕಳ ಯಕ್ಷಗಾನ ಕೇಂದ್ರದ ಪ್ರಮುಖ ಕಲಾವಿದೆಯಾಗಿ ದೇಶದ ನಾನಾ ಭಾಗಗಳಲ್ಲಿ ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಲ್ಲದೇ, ಅನೇಕ ತಾಳಮದ್ದಳೆಗಳಲ್ಲಿ ಅರ್ಥ ಹೇಳಿದ ಅನುಭವವನ್ನೂ ಹೊಂದಿದ್ದಾರೆ. ಪ್ರಜ್ಞಾ ಮತ್ತಿಹಳ್ಳಿಯವರಿಗೆ ಅಭಿನಂದನೆಗಳು.

## ಪ್ರೊ. ಎಚ್. ಎಸ್. ಕೆ. ನೆನಪಿನ ರಾಜ್ಯಮಟ್ಟದ ಸಾಹಿತ್ಯ ಪ್ರಶಸ್ತಿಗೆ ಕವಿ ಶಾರದಾ ಅಂಚನ್ ಆಯ್ಕೆ

ಮೈಸೂರಿನ ಗ್ರಾಮಾಂತರ ಬುದ್ಧಿಜೀವಿಗಳ ಬಳಗದ ಪ್ರೊ. ಎಚ್. ಎಸ್. ಕೆ ನೆನಪಿನ ರಾಜ್ಯಮಟ್ಟದ ಪ್ರಶಸ್ತಿಗೆ ನಗರದ ಲೇಖಕಿ, ಕವಯಿತ್ರಿ ಶಾರದಾ ಎ. ಅಂಚನ್‌ರವರು ಆಯ್ಕೆಯಾಗಿದ್ದಾರೆ.

ಯಶಸ್ ಪ್ರಕಾಶನ ರಿ ಹೆಬ್ಬಾರ್‌ಬೈಲು ತುಳು ಸಾಹಿತ್ಯ ಪ್ರತಿಭೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಯೋಜಿಸಿದ 'ಪೂವರಿ ಸಾಹಿತ್ಯ ಪ್ರಶಸ್ತಿ' ಕವಿತಾ ಸ್ಪರ್ಧೆಯಲ್ಲಿ ಶಾರದಾ ಅಂಚನ್‌ರವರ 'ಕೊರಂಬು' ಕವಿತೆಗೆ ಪ್ರಥಮ ಬಹುಮಾನ ಲಭಿಸಿದೆ. ಶಾರದಾ ಅಂಚನ್‌ರವರಿಗೆ ಅಭಿನಂದನೆಗಳು.

## Achievement



Shivnandan Hegde has scored 91% in the Xth Std., I.C.S.E. Board results. He also has the unique distinction of having scored 4 goals in a MSSA football match this year (Under 16 IIIrd Div.) while representing his school team (C.N.M. School). Last year too he scored the final goal in the MSSA football match (Under 16 IVth Div.) wherein the team lifted the Cup and the Gold Medal. An avid sports person, he has represented his school in Football, Cricket, Basketball and Kabbaddi.

We congratulate him.

## Vacancy

There is Vacancy for two Havyaka boys in Dombivili Havyaka Boys Hostel.

***Those interested may contact Havyaka Office :***
**26652591 or Shri G. V. Hegde : 9167434626**

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR***